**SC No. 278/2021**
**PW-13**

**ದಿನಾಂಕ 17–09–2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ**

ಚಾಸಾ–1 ರಿಂದ 3 ರವರಿಗೆ ನಾನು ಪ್ರಾಥಮಿಕ ಚಿಕಿತ್ಸೆಯನ್ನು ಬಿಟ್ಟರೆ ಗಾಯಗಳಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ . ದಾಖಲೆಗಳ ಆಧಾರದ ಮೇಲೆ ನಿಪಿ–14, 15 ಮತ್ತು 17 ರ ಗಾಯದ ಪ್ರಮಾಣ ಪತ್ರಗಳನ್ನು ನೀಡಿದ್ದೇನೆ ಎಂದರೆ ಸರಿ. ಸಾಮಾನ್ಯವಾಗಿ ಗಟ್ಟಿಯಾದ ವಸ್ತುಗಳು ಅಥವಾ ಕಬ್ಬಿಣದ ರಾಡು ಮೇಲಿಂದ ಮೈಮೇಲೆ ಮತ್ತು ತಲೆಯ ಮೇಲೆ ಬಿದ್ದರೆ ನಿಪಿ–14, 15 ಮತ್ತು 17 ರಲ್ಲಿ ನಮೂದು ಮಾಡಿರುವ ಗಾಯಗಳು ಆಗಬಹುದು ಎಂದರೆ ಸರಿ. ನಾನು ಗಾಯಾಳುಗಳನ್ನು ಪರೀಕ್ಷೆ ಮಾಡದಿದ್ದರೂ ಕೂಡ ಪೊಲೀಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.